## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಕರಡು ಟೆಂಡರ್ ದಸ್ತಾವೇಜುಗೆ ಅನುಮೋದನೆ ಕುರಿತು.

—

ಪೀಠಿಕೆ:

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿವಿಧ ಹಂತದ ಅಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:PWD 671 FC 2009, Bangalore, dated: 03.02.2010 ರ ಕ್ರಮ ಸಂಖ್ಯೆ:2 ರಲ್ಲಿ ಆರ್ಥಿಕ ಇಲಾಖೆಯಿಂದ ಪ್ರತಿಯೊಂದು ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲು ಮುಖ್ಯ ಇಂಜಿನಿಯರ್‌ರವರಿಗೆ ಪೂರ್ಣ ಅಧಿಕಾರ, ಅಧೀಕ್ಷಕ ಅಭಿಯಂತರರವರಿಗೆ ರೂ.50ಲಕ್ಷಗಳವರೆಗೆ, ಕಾರ್ಯಪಾಲಕ ಅಭಿಯಂತರರವರಿಗೆ ರೂ.10ಲಕ್ಷಗಳವರೆಗೆ, ಸಹಾಯಕ ಕಾರ್ಯಪಾಲಕ ಅಭಿಯಂತರರವರಿಗೆ ರೂ.2ಲಕ್ಷಗಳವರೆಗೆ, ಆರ್ಥಿಕ ಪ್ರತ್ಯಾಯೋಜನೆ ನೀಡಲಾಗಿದೆ. ಮುಂದುವರೆದು, ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರಿಗೆ ರೂ.500ಲಕ್ಷಗಳವರೆಗೆ ಅಧೀಕ್ಷಕ ಅಭಿಯಂತರರವರಿಗೆ ರೂ.100ಲಕ್ಷಗಳವರೆಗೆ, ಕಾರ್ಯಪಾಲಕ ಅಭಿಯಂತರರವರಿಗೆ ರೂ.50ಲಕ್ಷಗಳವರೆಗೆ , ಆರ್ಥಿಕ ಪ್ರತ್ಯಾ ಯೋಜನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ, ಕರಡು ಗುತ್ತಿಗೆ ದಸ್ತಾವೇಜುಗೆ (Draft Tender Schedule) ಅನುಮೋದನೆ ಕುರಿತಂತೆ, ಆರ್ಥಿಕ ಇಲಾಖೆಯಿಂದ ಯಾವ ಯಾವ ಅಧಿಕಾರಿಗಳು ಎಷ್ಟೆಷ್ಟು ಅಂದಾಜು ಮೊತ್ತದವರೆಗೆ ಅನುಮೋದನೆ ನೀಡಬಹುದು ಎಂಬುದರ ಬಗ್ಗೆ ಮೇಲ್ಕಂಡ ಆದೇಶಗಳಲ್ಲಿ ಪ್ರಸ್ತಾಪಿಸಿರುವುದಿಲ್ಲ. ಇದರಿಂದ, ಕರಡು ಗುತ್ತಿಗೆ ದಸ್ತಾವೇಜಿನ ಅನುಮೋದನೆಯಲ್ಲಿ ಗೊಂದಲವಿದ್ದು, ಸಾಕಷ್ಟು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ ಬಗ್ಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮತ್ತು KTPP ACT ಖಂಡಿಕೆ 172 ರಲ್ಲಿ ಪ್ರಸ್ತಾಪಿಸಿರುವುದನ್ನು ಅವಲೋಕಿಸಿ, ಕರಡು ಗುತ್ತಿಗೆ ದಸ್ತಾವೇಜಿಗೆ ಅನುಮೋದನೆ ನೀಡುವ ಅಧಿಕಾರವನ್ನು ಈ ಕೆಳಗಿನಂತೆ ಪ್ರತ್ಯಾಯೋಜಿಸಲು ತೀರ್ಮಾನಿಸಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 43 ಗ್ರಾನೀಸ (2) 10 ಬೆಂಗಳೂರು, ದಿ:17.8.2010**

ಕಾಮಗಾರಿಗಳ ಕರಡು ಗುತ್ತಿಗೆ ದಸ್ತಾವೇಜಿಗೆ ಆಯಾ ಯೋಜನೆಗೆ ಆಡಳಿತಾತ್ಮಕ ಆದೇಶ ನೀಡಿರುವ ಮಿತಿಗೆ ಸೀಮಿತಗೊಳಿಸಿ, ತಾಂತ್ರಿಕ ಅನುಮೋದನೆ ನೀಡುವ ಅಧಿಕಾರವನ್ನು ಕೆಳಕಂಡ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

| ಕ್ರಸಂ | ತಾಂತ್ರಿಕ ಮಂಜೂರಾತಿ ಮೊತ್ತ | ಅಧಿಕಾರಿಯ ಪದನಾಮ |
|---|---|---|
| 1 | ರೂ.50ಲಕ್ಷಗಳಿಗೆ ಮೇಲ್ಪಟ್ಟು | ಮುಖ್ಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ |
| 2 | ರೂ.10ಲಕ್ಷಗಳಿಗೆ ಮೇಲ್ಪಟ್ಟು ಹಾಗೂ ರೂ.50ಲಕ್ಷಗಳವರೆಗೆ | ಅಧೀಕ್ಷಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ |
| 3 | ರೂ.10ಲಕ್ಷಗಳವರೆಗೆ | ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ |

2. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/2/ಟಿಎಫ್‌ಪಿ/2010, ದಿ:30.4.2010ರನ್ವಯ, ಕುಡಿಯುವ ನೀರಿನ ಯೋಜನೆಗಳ ಬಾಬ್ತಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ರೂ.100ಲಕ್ಷ ವರೆಗಿನ ಪ್ರತಿ ಕಾಮಗಾರಿಗೆ / ಯೋಜನೆಯ ಕಾಮಗಾರಿ ಅಂದಾಜಿಗೆ, ಆಡಳಿತಾತ್ಮಕ ಅನುಮೋದನೆ ನೀಡಲು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರವಿದೆ. ಈ ರೀತಿ ಮಂಜೂರಾತಿ ನೀಡುವ ಮುನ್ನ ಅಗತ್ಯ ಅನುದಾನ ಲಭ್ಯತೆ ಖಾತ್ರಿ ಪಡಿಸಿಕೊಳ್ಳಬೇಕು ಹಾಗೂ ಪ್ರಚಲಿತದಲ್ಲಿರುವ ಯೋಜನೆ / ಕಾರ್ಯಕ್ರಮಗಳ ಮಾರ್ಗ ಸೂಚಿಗಳನ್ನು ಪಾಲಿಸತಕ್ಕದ್ದು.

3. ಸದರಿ ಕಾಮಗಾರಿಗಳ ಬದಲು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲು ಪ್ರಸ್ತಾವನೆ ನೀಡುವಂತೆ ಅಥವಾ ಪ್ರಸ್ತಾವನೆ ಸಲ್ಲಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸುವುದು.

4. ರಸ್ತೆ ಅಭಿವೃದ್ಧಿಯಡಿ ಮಣ್ಣಿನ ರಸ್ತೆ ನಿರ್ಮಾಣ ಹಾಗೂ ಜಲ್ಲಿ ಮಾತ್ರ ಹಾಕಲು ಅವಕಾಶವಿಲ್ಲ. ಡಾಂಬರೀಕರಣ ಅ ಕಾಂಕ್ರೀಟೀಕರಣಗೊಳಿಸುವ ಕಾಮಗಾರಿಗಳನ್ನು ಮಾತ್ರ ಪರಿಗಣಿಸುವುದು.

5. ರೂ.3.00 ಲಕ್ಷಕ್ಕಿಂತ ಕಡಿಮೆ ಮೊತ್ತದ ಕಾಮಗಾರಿಗಳನ್ನು ಪ್ರಸ್ತಾಪಿಸುವಂತಿಲ್ಲ.

6. ಸರ್ಕಾರದಿಂದ ಅನುಮೋದನೆಗೊಂಡ ಕಾಮಗಾರಿ ಮೊತ್ತವನ್ನು ಪುನಃ ವಿಭಜಿಸಲು, ಶಿಫಾರಸ್ಸು ಮಾಡುವಂತಿಲ್ಲ.

7. ಸೊಸೈಟಿ ಅಧಿನಿಯಮದಡಿ ನೋಂದಾಯಿಸಲ್ಪಟ್ಟ ಖಾಸಗಿ ಸೊಸೈಟಿ ಅಥವಾ ಭಾರತೀಯ ಟ್ರಸ್ಟ್ ನಿಯಮಗಳ ಅ ನೋಂದಾಯಿಸಲ್ಪಟ್ಟ ಟ್ರಸ್ಟ್‌ಗಳಿಗೆ ಸಮುದಾಯ ಭವನ ನಿರ್ಮಿಸಲು ಈ ಕೆಳಕಂಡ ಷರತ್ತುಗಳನ್ನು ಪಾಲಿಸುವುದು:-

(ಅ) ಅಂತಹ ಟ್ರಸ್ಟ್/ಸೊಸೈಟಿಗಳು ನೋಂದಣಿಯಾಗಿ ಕನಿಷ್ಠ ಮೂರು ವರ್ಷ ಪೂರೈಸಿರಬೇಕು ಹಾಗು ಸೊಸೈಟಿ ನೋಂದಣಿ ಪ್ರತಿ ವರ್ಷ ನವೀಕರಿಸಬೇಕು.

(ಆ) ಅಂತಹ ಸೊಸೈಟಿ/ಟ್ರಸ್ಟ್‌ಗಳು ಒಂದೇ ಕುಟುಂಬದ ಸದಸ್ಯರನ್ನು ಒಳಗೊಂಡಿರಬಾರದು.

(ಇ) ಈ ಸಂಸ್ಥೆಗಳು ಲಾಭದಾಯಕ ಉದ್ದೇಶ ಹೊಂದಿರಬಾರದು.

(ಈ) ಪ್ರತಿ ವರ್ಷ ಲೆಕ್ಕ ಪರಿಶೋಧನೆಯಾಗಿರಬೇಕು.

(ರಫೀಕ್ ಅಹಮದ್.ಎಂ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ 1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:
1. ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ.
2. ಕಾರ್ಯದರ್ಶಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ.
3. ಕಾರ್ಯದರ್ಶಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು.

ಪ್ರತಿ:
1. ಮಾನ್ಯ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ನಿರ್ದೇಶಕರು, ಎಡಿಬಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5. ವಾರದ ರಾಜ್ಯ ಪತ್ರ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಯೋಇ 48 ಮಪ್ರಮಂ 2017

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:28.11.2017

## ಸುತ್ತೋಲೆ

ವಿಷಯ: ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕರಾವಳಿ ಅಭಿವೃದ್ಧಿ ಪ್ರಾಧಿಕಾರ–ಈ ಸಂಸ್ಥೆಗಳು ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವ ಬಗ್ಗೆ.

* * * *

ಯೋಜನಾ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರಾವಳಿ ಅಭಿವೃದ್ಧಿ ಪ್ರಾಧಿಕಾರ–ಈ ಸಂಸ್ಥೆಗಳು ಆಯಾ ವರ್ಷದಲ್ಲಿ ಲಭ್ಯವಿರುವ ಅನುದಾನಕ್ಕೆ ಸಂಬಂಧಿಸಿದಂತೆ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು.

1. ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅವಕಾಶವಿರುವುದಿಲ್ಲ:–
   - ವಸತಿಗೃಹಗಳ ನಿರ್ಮಾಣ.
   - ವಾಣಿಜ್ಯ ಉದ್ದೇಶವನ್ನು ಹೊಂದಿರುವ ಕಾಮಗಾರಿಗಳು.
   - ಆವರ್ತಕ ವೆಚ್ಚ, ನಿರ್ವಹಣಾ ವೆಚ್ಚ, ಭೂಸ್ವಾಧೀನ ಮತ್ತು ಭೂ ಪರಿಹಾರಕ್ಕೆ ಸಂಬಂಧಪಟ್ಟ ಕಾಮಗಾರಿಗಳು.
   - ಯಾವುದೇ ಸಂಸ್ಥೆಗೆ ಸಾಲ/ಅನುದಾನ ನೀಡುವುದು.
   - ಸ್ಮಾರಕ ಮತ್ತು ಸ್ಮಾರಕ ಕಟ್ಟಡಗಳು,
   - ವೈಯಕ್ತಿಕ ಫಲಾನುಭವಿ ಯೋಜನೆಗಳು.
   - ಧಾರ್ಮಿಕ ಸ್ಥಳಗಳಲ್ಲಿ ಕಾಮಗಾರಿಗಳು.

2. ಈ ಕೆಳಕಂಡ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸತಕ್ಕದ್ದಲ್ಲ:–
   - ಕೊಳವೆಬಾವಿ ಕೊರೆಯುವುದು, ತೆರೆದ ಬಾವಿ ಕೊರೆಯುವುದು ಹಾಗೂ ಪಂಪ್ ಸೆಟ್ ಖರೀದಿಸುವುದು.
   - ಸಿಂಟೆಕ್ಸ್ ಟ್ಯಾಂಕ್ ಖರೀದಿ, ಪೈಪ್ ಲೈನ್ ಖರೀದಿ.
   - ಜನರೇಟರ್ ಅಥವಾ ಯಾವುದೇ ಯಂತ್ರ ಖರೀದಿ.
   - ಲ್ಯಾಬ್ ಸ್ಥಾಪನೆ ಪ್ರಸ್ತಾವನೆಗಳು ಮತ್ತು ಯಾವುದೇ ವೈಯಕ್ತಿಕ ಫಲಾನುಭವಿಗಳಿಗೆ ಪರಿಕರ ವಿತರಣೆ, ಹೈ ಮಾಸ್ಟ್ ಲೈಟ್ ಅಳವಡಿಕೆಗೆ, ಬೀದಿ ದೀಪ ಅಳವಡಿಕೆಗೆ ಹಾಗು ಬೀದಿ ದೀಪ ವಿದ್ಯುದೀಕರಣಕ್ಕೆ ಅವಕಾಶವಿಲ್ಲ.

..2

9. ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾ ಪಟ್ಟಿ (MPIC) ನಮೂನೆಯಲ್ಲಿ 2018-19ನೇ ಸಾಲಿಗೆ ವಾರ್ಷಿಕ ಹಾಗೂ ಮಾಸಿಕ ಸಂಭವನೀಯ ವೆಚ್ಚಕ್ಕೆ ಅನುಗುಣವಾಗಿ ತೆಗೆದುಕೊಳ್ಳಲಾಗುವ ಕಾರ್ಯಕ್ರಮಗಳನ್ನು ನಿರ್ಧರಿಸಿ, ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಮಾಹೆವಾರು ನಿಗಧಿಪಡಿಸಿ ಸರ್ಕಾರಕ್ಕೆ ಸಲ್ಲಿಸುವುದು. ಪ್ರತಿ ತಿಂಗಳು ಇಲಾಖಾ ಅಪರ ಮುಖ್ಯಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮಾಸಿಕ ಕಾರ್ಯಕ್ರಮಗಳ ವೇಳಾಪಟ್ಟಿ(MPIC) ಅನ್ವಯ ನಡೆಯುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಷಯವನ್ನು ಚರ್ಚಿಸಲು ಅನುಕೂಲವಾಗುವಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವರದಿಯನ್ನು ನಿಗಧಿತ ಎಂಪಿಕ್ ನಮೂನೆಯಲ್ಲಿ ಪ್ರತಿ ಮಾಹೆಯ ದಿನಾಂಕ: 10 ರೊಳಗೆ ಕಳುಹಿಸಿಕೊಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವೈ. ಎಸ್. ದಳವಾಯಿ)
ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ)
ಯೋಜನಾ ಇಲಾಖೆ.

ಗೆ,

1. ಮಹಾಲೇಖಪಾಲರು -1 ಮತ್ತು 2. ಕರ್ನಾಟಕ ವೃತ್ತ, ಬೆಂಗಳೂರು.
2. ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು.
8. ಮುಖ್ಯ ಮೌಲ್ಯಮಾಪನಾಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬೆಂಗಳೂರು.
9. ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ.
"ಮಲೆನಾಡ ಸಿರಿ" ಸಾಗರ ರಸ್ತೆ, ಶಿವಮೊಗ್ಗ-577201.
10. ಕಾರ್ಯದರ್ಶಿ, ಹೈ-ಕರ್ನಾಟಕ ಪ್ರ.ಅ.ಮಂಡಳಿ, ವಿಕಾಸಭವನ, (ಮಿನಿ ವಿಧಾನಸೌಧ)
ಸ್ಟೇಷನ್ ರಸ್ತೆ, ಗುಲ್ಬರ್ಗ-585102.
11. ಕಾರ್ಯದರ್ಶಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ.
ಆರ್.ಟಿ.ಓ. ಕಚೇರಿ ಹತ್ತಿರ, ತುರುವನೂರು, ಚಿತ್ರದುರ್ಗ.
12. ಕಾರ್ಯದರ್ಶಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ.
ಮಂಗಳೂರು ಮಹಾನಗರ ಪಾಲಿಕೆ ವಾಣಿಜ್ಯ ಸಂಕೀರ್ಣ,
2ನೇ ಮಹಡಿ, ಲಾಲ್‌ಬಾಗ್, ಮಂಗಳೂರು-575003.
13. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.
14. ಯೋಜನಾ ಇಲಾಖೆಯ ಎಲ್ಲಾ ಕಾರ್ಯನಿರತ ವಿಭಾಗಗಳ ಹಿರಿಯ ನಿರ್ದೇಶಕರು, / ನಿರ್ದೇಶಕರು.
15. ಸರ್ಕಾರದ ಉಪ ಕಾರ್ಯದರ್ಶಿ, ಎಸ್.ಡಿ.ಪಿ. ಕೋಶ, ಯೋಜನಾ ಇಲಾಖೆ.
16. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಯೋಜನಾ ಇಲಾಖೆ.
17. ಯೋಜನಾ ನಿರ್ದೇಶಕರು, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
18. ಯೋಜನಾ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿಗಳಿಗೆ.
19. ಯೋಜನಾ ಇಲಾಖೆಯ ಎಲ್ಲಾ ಶಾಖಾಧಿಕಾರಿಗಳಿಗೆ.
20. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ರಾಜ್ಯವಲಯದ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದಂತೆ, 2018–19ನೇ ಸಾಲಿಗೆ ಯೋಜನಾ ಕಾರ್ಯಕ್ರಮಗಳನ್ನು ಮುಂದುವರೆಸುವ ಬಗ್ಗೆ.

ಪ್ರಸ್ತಾವನೆ:

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ 2018–19ನೇ ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಪುಸ್ತಕದಲ್ಲಿ ವ್ಯಕ್ತವಾದಂತೆ, ವಿವಿಧ ಯೋಜನಾ ಕಾರ್ಯಕ್ರಮಗಳಿಗೆ ಅನುದಾನವನ್ನು ಒದಗಿಸಲಾಗಿರುತ್ತದೆ. ಅದರಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಯೋಜನಾ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಇಲಾಖೆ / ಸಂಸ್ಥೆ / ಮಂಡಳಿ / ಪ್ರಾಧಿಕಾರಗಳಿಗೆ ಸಂಬಂಧಿಸಿದ ಯೋಜನಾ ಕಾರ್ಯಕ್ರಮಗಳನ್ನು 2018–19ನೇ ಸಾಲಿಗೆ ಮುಂದುವರೆಸಿ, ಆದೇಶವನ್ನು ಹೊರಡಿಸಬೇಕಾಗಿರುತ್ತದೆ.

ಅದರಂತೆ ಕೆಳಕಂಡ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ: ಪಿಡಿ 88 ಎಸ್‌ಎಂಒ 2018 ದಿನಾಂಕ:26–03–2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಇಲಾಖೆ / ಸಂಸ್ಥೆ / ಮಂಡಳಿ / ಪ್ರಾಧಿಕಾರಗಳಿಗೆ ಸಂಬಂಧಿಸಿದಂತೆ ಈ ಆದೇಶದ ಅನುಬಂಧದಲ್ಲಿ ಪಟ್ಟಿ ಮಾಡಿರುವ ಯೋಜನಾ ಕಾರ್ಯಕ್ರಮಗಳನ್ನು 2018–19ನೇ ಸಾಲಿನಲ್ಲಿ ಮುಂದುವರೆಸಿಕೊಂಡು ಹೋಗಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸರ್ಕಾರವು ಅನುಮೋದನೆ ನೀಡಿದೆ.

1. ಅನುಬಂಧದಲ್ಲಿ ತಿಳಿಸಿರುವ ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಬೇಕಾದ ದಿನಾಂಕವು ಏಪ್ರಿಲ್ 01, 2018 ರಿಂದ ಜಾರಿಗೆ ಬರುತ್ತದೆ.
2. ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ವಲಯ ಯೋಜನಾ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರವು 2018–19ನೇ ಸಾಲಿನಲ್ಲಿ ಮುಂದುವರೆಸಿರುವುದನ್ನು ಮತ್ತು ಕೇಂದ್ರ ಸರ್ಕಾರದ 2018–19ನೇ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಿರುವುದನ್ನು ಖಾತರಿಪಡಿಸಿಕೊಂಡು 2018–19ನೇ ಸಾಲಿನಲ್ಲಿ ಸಾಧಿಸಬೇಕಾದ ಪ್ರಗತಿ ಹಾಗೂ ಫಲಾನುಭವಿಗಳನ್ನು ಒಳಗೊಂಡಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ ಕಾರ್ಯರೂಪಕ್ಕೆ ತರಲು ಆದೇಶಿಸಲಾಗಿದೆ.
3. 2017–18ನೇ ಸಾಲಿನಲ್ಲಿ ಮುಂದುವರೆದ ಹಾಗೂ ಯೋಜನಾ ಕಾರ್ಯಕ್ರಮಗಳನ್ನು ಮಾತ್ರ 2018–19ರಲ್ಲಿ ಮುಂದುವರೆಸುವುದು.
4. 2017–18ನೇ ಸಾಲಿನ ಮುಂದುವರೆದ ಯೋಜನೆಯಡಿಯಲ್ಲಿನ ಅಪೂರ್ಣ ಕಾಮಗಾರಿಗಳನ್ನು ಪ್ರಸ್ತುತ ಸಾಲಿನಲ್ಲಿ ಮುಂದುವರೆಸುವುದು ಹಾಗೂ 2018–19ನೇ ಸಾಲಿನ ಹೊಸ ಕಾಮಗಾರಿಗಳಿಗೆ ಅಥವಾ ಹೊಸ ಘಟಕಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಮಂಜೂರಾತಿ ಪಡೆಯುವುದು.
5. ಆರ್ಥಿಕ ಇಲಾಖೆಯ ಸೂಚನೆಗೆ ಅನುಗುಣವಾಗಿ ವೆಚ್ಚವನ್ನು ಲೇಖಾನುದಾನದ ಮಿತಿಗೆ ಸೀಮಿತಗೊಳಿಸುವುದು.
6. ಕ್ಷೇತ್ರಿಯ ಅಧಿಕಾರಿಗಳು ತಮಗೆ ಬೇಡಿಕೆ ಇರುವ ಹಣದ ವಿಚಾರದಲ್ಲಿ ಮುನ್ನೆಚ್ಚರಿಕೆ ವಹಿಸಿ ಮುಂಚಿತವಾಗಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿಕೊಡಬೇಕು ಹಾಗೂ ಅವರ ವ್ಯಾಪ್ತಿಗೆ ಬರುವಂತಹ ಹಣದ ಜವಾಬ್ದಾರಿಯೊಂದಿಗೆ ಕಾರ್ಯನಿರ್ವಹಣೆಯನ್ನು ನಡೆಸಿಕೊಂಡು ಹೋಗತಕ್ಕದ್ದು.
7. ಫಲಾನುಭವಿ ಆಧಾರಿತ ನಿಗದಿತ ಕಾರ್ಯಕ್ರಮಗಳಲ್ಲಿ ಶೇ.33 ರಷ್ಟನ್ನು ಮಹಿಳೆಯರ ಅಭಿವೃದ್ಧಿಗೆ ಮೀಸಲಿಡತಕ್ಕದ್ದು.
8. ವಿಶೇಷ ಘಟಕ ಯೋಜನೆ, ಗಿರಿಜನ ಉಪ ಯೋಜನೆ, ವಿಶೇಷ ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳಡಿಯಲ್ಲಿ 2018–19ನೇ ಸಾಲಿನಲ್ಲಿ ಒದಗಿಸಿರುವ ಅನುದಾನಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕ್ರಿಯಾ ಯೋಜನೆಗಳನ್ನು ತಯಾರಿಸಿ ಸಲ್ಲಿಸುವುದು. ಅಲ್ಲದೇ ಸಮಾಜ ಕಲ್ಯಾಣ ಇಲಾಖೆಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡು ನಿಗದಿಪಡಿಸಲಾಗುವ ಮೊತ್ತಕ್ಕೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಎಂಪಿಕ್ (MPIC) ನಮೂನೆಯಲ್ಲಿ ರೂಪಿಸಿ ಕಡ್ಡಾಯವಾಗಿ ಅನುಷ್ಠಾನಗೊಳಿಸುವುದು. ಪ್ರಗತಿಯ ವಿವರಗಳನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ನಿರ್ದೇಶಕರು ಪರಿಶಿಷ್ಟ ವರ್ಗಗಳ ಇಲಾಖೆ ಹಾಗೂ ಸರ್ಕಾರಕ್ಕೆ ತಪ್ಪದೇ ಕಳುಹಿಸತಕ್ಕದ್ದು.

3. ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಅಪರ ನಿರ್ದೇಶಕರು (ಆರ್ಥಿಕ) ಇವರ ಟಿಪ್ಪಣಿ ಸಂಖ್ಯೆ:ಗ್ರಾಅಪ/43/ಗ್ರಾನೀಸ(2) 10ರ ಖಂಡಿಕೆ (4), ದಿ:11.8.2010ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/8/2010

(ಜಿ.ಎಸ್.ನಾರಾಯಣಸ್ವಾಮಿ)
ಸರ್ಕಾರದ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳು :

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಆಡಿಟ್-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಆಡಿಟ್-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
9. ವಿಶೇಷಾಧಿಕಾರಿ(ವೆಚ್ಚ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು-1
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಪಂರಾ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ, ಅಭಯ ಸಂಕೀರ್ಣ, 4ನೇ ಮಹಡಿ, ನಂ.55, ರಿಚ್ಮಂಡ್ ರಸ್ತೆ, ಶಾಂತಿನಗರ , ಬೆಂಗಳೂರು-20.
12. ಎಲ್ಲಾ ಜಿಲ್ಲಾಪಂಚಾಯತ್‌ಗಳ ಅಧ್ಯಕ್ಷರು.
13. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು
14. ರಾಜ್ಯದ ಎಲ್ಲಾ (8) ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರುಗಳು.
15. ಎಲ್ಲಾ (38) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ಗಳು.
16. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್‌ರ ಕಛೇರಿ, PRED ಬೆಂಗಳೂರು.
17. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ ಇಲಾಖೆ, ಬೆಂಗಳೂರು.
18. ಉಪ ನಿರ್ದೇಶಕರು, ಪೇರೋಲ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
19. ಮಹಾ ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
20. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ (ಪಂರಾ) ಇವರ ಆಪ್ತ ಕಾರ್ಯದರ್ಶಿಗಳು.
21. ನಿರ್ದೇಶಕರು, KRWSSA ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ/ನಿರ್ದೇಶಕರು(ಗ್ರಾಮಸ್ವರಾಜ್)/ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ ಕರ್ನಾಟಕ ವಿಕಾಸ ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಮಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗದ 2017-18ನೇ ಸಾಲಿನ ಕ್ರಿಯಾ ಯೋಜನೆ ಅನುಮೋದಿಸುವ ಬಗ್ಗೆ.

**ಓದಲಾಗಿದೆ:**

1. ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರ ಪತ್ರ ಸಂಖ್ಯೆ:ಮಪ್ರಅಮಂ:ಶಿ:ಯೋಸ: ಮುಂ:ಕಾ:ಕ್ರಿಯೋ:2017-18/425, ದಿನಾಂಕ:12.07.2017.
2. ಸರ್ಕಾರದ ಪತ್ರ ಸಂಖ್ಯೆ: ಯೋಇ 35 ಪಿಟಿಪಿ 2017 ದಿನಾಂಕ:28.04.2017
3. ಸರ್ಕಾರದ ಪತ್ರ ಸಂಖ್ಯೆ: ಯೋಇ 48 ಮಪ್ರಮಂ 2017 ದಿನಾಂಕ:22.06.2017(ಎರಡು ಪತ್ರಗಳು), 13.07.2017, 07.08.2017 ಮತ್ತು 22.08.2017.

****

**ಪ್ರಸ್ತಾವನೆ:** ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗಕ್ಕೆ 2017-18ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ.

| ಕ್ರ ಸಂ | ಲೆಕ್ಕಶೀರ್ಷಿಕೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | 2515-00-103-0-02-101 (ಸಹಾಯಾನುದಾನ) | 52.00 |
| 2 | 4515-00-800-0-03-132 (ಬಂಡವಾಳ ವೆಚ್ಚಗಳು) | 4502.00 |
| 3 | 4515-00-800-0-03-422 (ವಿಶೇಷ ಘಟಕ ಯೋಜನೆ) | 1030.00 |
| 4 | 4515-00-800-0-03-423 (ಗಿರಿಜನ ಉಪ ಯೋಜನೆ) | 416.00 |
| | ಒಟ್ಟು | 6000.00 |

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ-ಇವರು 2017-18ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ರೂ.6000.00 ಲಕ್ಷ ಮತ್ತು ಪ್ರಸಕ್ತ ಸಾಲಿನ ಆರಂಭಿಕ ಶಿಲ್ಕು ರೂ.2131.57 ಲಕ್ಷ ಸೇರಿ ಒಟ್ಟು ರೂ.8131.57 ಲಕ್ಷಗಳಲ್ಲಿ 2017-18ನೇ ಸಾಲಿಗೆ ಆಡಳಿತ ವೆಚ್ಚ ರೂ.64.31 ಲಕ್ಷಗಳನ್ನು ಹೊರತುಪಡಿಸಿ, ಕಾಮಗಾರಿಗಳಿಗೆ ಲಭ್ಯವಿರುವ ರೂ.8067.26 ಲಕ್ಷಗಳಲ್ಲಿ 661 ಮುಂದುವರೆದ ಕಾಮಗಾರಿಗಳಿಗೆ ರೂ.3293.56 ಲಕ್ಷಗಳನ್ನು ಹಾಗೂ ಮೂರನೇ ಸಂಸ್ಥೆಯಿಂದ (Third party inspection) ಕಾಮಗಾರಿಗಳ ತಪಾಸಣೆ ನಡೆಸಲು ರೂ.45.00 ಲಕ್ಷಗಳನ್ನು ಮೀಸಲಿರಿಸಿ, ರೂ.4495.94 ಲಕ್ಷಗಳ 907 ಹೊಸ ಕಾಮಗಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದು, ಮೇಲೆ (2)ರಲ್ಲಿ ಸೂಚಿಸಿರುವಂತೆ ಒಟ್ಟು ರೂ.14.00 ಲಕ್ಷದ ಮೊತ್ತದ ಕಾಮಗಾರಿಗಳನ್ನು ಸದರಿ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ.

ಅಲ್ಲದೆ, ಮೇಲೆ (3)ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ಒಟ್ಟಾರೆ ರೂ.1883.40 ಲಕ್ಷಗಳ 175 ಕಾಮಗಾರಿಗಳನ್ನು ಅನುಮೋದಿಸಲಾಗಿದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ:

-2

**ಸರ್ಕಾರಿ ಆದೇಶ ಸಂಖ್ಯೆ:ಯೋಇ 48 ಮಪ್ರಅಂ 2017, ಬೆಂಗಳೂರು, ದಿನಾಂಕ:23.08.2017**

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗಕ್ಕೆ 2017-18ನೇ ಸಾಲಿನಲ್ಲಿ ಒದಗಿಸಿರುವ ಅನುದಾನ ರೂ.6000.00 ಲಕ್ಷಗಳು ಮತ್ತು ಪ್ರಸಕ್ತ ಸಾಲಿನ ಆರಂಭಿಕ ಶಿಲ್ಕು ರೂ.2131.57 ಲಕ್ಷಗಳು ಸೇರಿ ಒಟ್ಟಾರೆ ಮೊತ್ತದ ರೂ.8131.57 ಲಕ್ಷಗಳಲ್ಲಿ ಪ್ರಸಕ್ತ ಸಾಲಿನ ಆಡಳಿತಾತ್ಮಕ ವೆಚ್ಚ ರೂ.64.31 ಲಕ್ಷಗಳನ್ನು ಹಾಗೂ ಮೂರನೇ ಸಂಸ್ಥೆಯಿಂದ ಕಾಮಗಾರಿಗಳ ತಪಾಸಣೆ ನಡೆಸುವುದಕ್ಕಾಗಿ ರೂ.45.00 ಲಕ್ಷಗಳನ್ನು ಮೀಸಲಿರಿಸಿ, ಬಾಕಿ ಉಳಿದಿರುವ ಅನುದಾನ ರೂ.8022.26 ಲಕ್ಷಗಳಲ್ಲಿ ರೂ.3293.56 ಲಕ್ಷಗಳ ಮೊತ್ತದ 661 ಮುಂದುವರೆದ ಕಾಮಗಾರಿಗಳನ್ನು ಹಾಗೂ ರೂ.4495.94 ಲಕ್ಷಗಳ ಅಂದಾಜು ಮೊತ್ತದ 907 ಹೊಸ ಕಾಮಗಾರಿಗಳನ್ನು ಕೈಗೊಳ್ಳುವ ಕ್ರಿಯಾ ಯೋಜನೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ:-

1. ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅವಕಾಶವಿರುವುದಿಲ್ಲ:-
   - ವಸತಿಗೃಹಗಳ ನಿರ್ಮಾಣ.
   - ವಾಣಿಜ್ಯ ಉದ್ದೇಶವನ್ನು ಹೊಂದಿರುವ ಕಾಮಗಾರಿಗಳು.
   - ಆವರ್ತಕ ವೆಚ್ಚ, ನಿರ್ವಹಣಾ ವೆಚ್ಚ, ಭೂಸ್ವಾಧೀನ ಮತ್ತು ಭೂ ಪರಿಹಾರಕ್ಕೆ ಸಂಬಂಧಪಟ್ಟ ಕಾಮಗಾರಿಗಳು.
   - ಯಾವುದೇ ಸಂಸ್ಥೆಗೆ ಸಾಲ/ಅನುದಾನ ನೀಡುವುದು.
   - ಸ್ಮಾರಕ ಮತ್ತು ಸ್ಮಾರಕ ಕಟ್ಟಡಗಳು.
   - ವೈಯಕ್ತಿಕ ಫಲಾನುಭವಿ ಯೋಜನೆಗಳು.
   - ಧಾರ್ಮಿಕ ಸ್ಥಳಗಳಲ್ಲಿ ಕಾಮಗಾರಿಗಳು.
2. ಮಂಡಳಿಯು ಸಲ್ಲಿಸಿರುವ ಕ್ರಿಯಾ ಯೋಜನೆಯು ಮಂಡಳಿಯ ಧ್ಯೇಯಗಳಿಗೆ ಅನುಗುಣವಲ್ಲದ ಕೆಲವು ಪ್ರಸ್ತಾವನೆಗಳನ್ನು ಒಳಗೊಂಡಿರುವುದರಿಂದ ಈ ಕೆಳಕಂಡ ಪ್ರಸ್ತಾವನೆಗಳನ್ನು ಅನುಮೋದಿಸಿರುವುದಿಲ್ಲ.
   - ಕೊಳವೆಬಾವಿ ಕೊರೆಯುವುದು, ತೆರೆದ ಬಾವಿ ಕೊರೆಯುವುದು ಹಾಗೂ ಪಂಪ್ ಸೆಟ್ ಖರೀದಿಸುವುದು.
   - ಸಿಂಟೆಕ್ಸ್ ಟ್ಯಾಂಕ್ ಖರೀದಿ, ಪೈಪ್ ಲೈನ್ ಖರೀದಿ.
   - ಜನರೇಟರ್ ಅಥವಾ ಯಾವುದೇ ಯಂತ್ರ ಖರೀದಿ
   - ಲ್ಯಾಬ್ ಸ್ಥಾಪನೆ ಪ್ರಸ್ತಾವನೆಗಳು ಮತ್ತು ಯಾವುದೇ ವೈಯಕ್ತಿಕ ಫಲಾನುಭವಿಗಳಿಗೆ ಪರಿಕರಣ ವಿತರಣೆ, ಹೈ ಮಾಸ್ಟ್ ಲೈಟ್ ಅಳವಡಿಕೆಗೆ, ಬೀದಿ ದೀಪ ಅಳವಡಿಕೆಗೆ ಹಾಗು ಬೀದಿ ದೀಪ ವಿದ್ಯುತೀಕರಣಕ್ಕೆ ಅವಕಾಶವಿಲ್ಲ.
3. ಸದರಿ ಕಾಮಗಾರಿಗಳ ಬದಲು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲು ಪ್ರಸ್ತಾವನೆ ನೀಡಲು ತಿಳಿಸುವುದು ಅಥವಾ ಬೇರೆ ಪ್ರಸ್ತಾವನೆ ಸಲ್ಲಿಸಬೇಕೆಂದು ಸಂಬಂಧಪಟ್ಟವರಿಗೆ ಸೂಚಿಸುವುದು.

..3

4. ರಸ್ತೆ ಅಭಿವೃದ್ಧಿಯಡಿ ಮಣ್ಣಿನ ರಸ್ತೆ ನಿರ್ಮಾಣ ಹಾಗೂ ಜಲ್ಲಿ ಮಾತ್ರ ಹಾಕಲು ಅವಕಾಶವಿಲ್ಲ. ಡಾಂಬರೀಕರಣ ಅಥವಾ ಕಾಂಕ್ರೀಟೀಕರಣಗೊಳಿಸಲು ಮಾತ್ರ ಅನುಮೋದನೆ ನೀಡಲಾಗಿದೆ.

5. ರೂ.3.00 ಲಕ್ಷಕ್ಕಿಂತ ಕಡಿಮೆ ಕಾಮಗಾರಿಗೆ ಅನುಮೋದನೆ ನೀಡುವಂತಿಲ್ಲ. ಈಗಾಗಲೇ ಅನುಮೋದನೆ ನೀಡಿದ್ದಲ್ಲಿ, ಬದಲಿ ಕಾಮಗಾರಿ ಪ್ರಸ್ತಾವನೆ ಸಲ್ಲಿಸಲು ಸಂಬಂಧಪಟ್ಟವರಿಗೆ ತಿಳಿಸುವುದು ಅಥವಾ ಸದರಿ ಕಾಮಗಾರಿಗಳನ್ನು ಕೈಬಿಡುವುದು.

6. ಸರ್ಕಾರದ ಅನುಮೋದನೆಗೊಂಡ ಕಾಮಗಾರಿ ಮೊತ್ತವನ್ನು ಪುನಃ ವಿಭಜಿಸಲು ಅನುಮೋದನೆ ನೀಡುವಂತಿಲ್ಲ, ವಿಭಾಗವನ್ನು ಮಾಡುವಂತಿಲ್ಲ. ಬದಲಿ ಕಾಮಗಾರಿ ಪ್ರಸ್ತಾವನೆ ಮಾತ್ರ ಅನುಮೋದನೆಗೆ ಸಲ್ಲಿಸುವುದು.

7. ಮಂಡಳಿಯ ಅಧ್ಯಕ್ಷರು ಪ್ರಸ್ತಾಪಿಸಿರುವ ರೂ. 430.02 ಲಕ್ಷಗಳ ಕಾಮಗಾರಿಗಳನ್ನು ರೂ.300.00 ಲಕ್ಷಗಳಿಗೆ ಸೀಮಿತಗೊಳಿಸಿ, ಮರು ಪ್ರಸ್ತಾವನೆ ಸಲ್ಲಿಸಲು ಅವರಿಗೆ ತಿಳಿಸುವುದು.

8. ಸೊಸೈಟಿ ಅಧಿನಿಯಮದಡಿ ನೋಂದಾಯಿಸಲ್ಪಟ್ಟ ಖಾಸಗಿ ಸೊಸೈಟಿ ಅಥವಾ ಭಾರತೀಯ ಟ್ರಸ್ಟ್ ನಿಯಮಗಳ ಅಡಿ ನೋಂದಾಯಿಸಲ್ಪಟ್ಟ ಟ್ರಸ್ಟ್‌ಗಳಿಗೆ ಸಮುದಾಯ ಭವನ ನಿರ್ಮಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ:

   (ಅ) ಅಂತಹ ಟ್ರಸ್ಟ್/ಸೊಸೈಟಿಗಳು ನೋಂದಣಿಯಾಗಿ ಕನಿಷ್ಠ ಮೂರು ವರ್ಷ ಪೂರೈಸಿಬೇಕು ಹಾಗು ಸೊಸೈಟಿ ನೋಂದಣಿ ಪ್ರತಿ ವರ್ಷ ನವೀಕರಿಸಬೇಕು.

   (ಆ) ಅಂತಹ ಸೊಸೈಟಿ/ಟ್ರಸ್ಟ್‌ಗಳು ಒಂದೇ ಕುಟುಂಬದ ಸದಸ್ಯರನ್ನು ಒಳಗೊಂಡಿಬಾರದು.

   (ಇ) ಈ ಸಂಸ್ಥೆಗಳು ಲಾಭದಾಯಕ ಉದ್ದೇಶ ಹೊಂದಿರಬಾರದು.

   (ಈ) ಪ್ರತಿ ವರ್ಷ ಲೆಕ್ಕ ಪರಿಶೋಧನೆಯಾಗಿರಬೇಕು.

9. ಮೇಲೆ (2) ಮತ್ತು (3)ರಲ್ಲಿ ಓದಲಾದ ಸರ್ಕಾರಿ ಪತ್ರಗಳಲ್ಲಿ ಅನುಮೋದಿಸಿದ/ಸೂಚಿಸಿದ ಕಾಮಗಾರಿಗಳನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ 2017-18ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸುವುದು.

10. ಅನುಮೋದಿತ ಎಲ್ಲಾ ಕಾಮಗಾರಿಗಳನ್ನು ಇದೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದಿರುವುದರಿಂದ, ಈ ಕಾಮಗಾರಿಗಳಿಗೆ ಕೊರತೆಯಿರುವ ಅನುದಾನವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಫೀ ಅಹಮದ್.ಎಂ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ 1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:
ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕರಾವಳಿ ಅಭಿವೃದ್ಧಿ ಪ್ರಾಧಿಕಾರ- ಇವುಗಳ ಕ್ರಿಯಾ ಯೋಜನೆಯಲ್ಲಿ ನಿರ್ವಹಿಸುವ ಕಾಮಗಾರಿಗಳಿಗೆ ಮುಂಗಡ ಹಣ ನೀಡುವ ಬಗ್ಗೆ.

***

**ಸರ್ಕಾರಿ ಆದೇಶ ಸಂಖ್ಯೆ:ಯೋಇ 100 ಪಿಟಿಪಿ 2017, ಬೆಂಗಳೂರು, ದಿನಾಂಕ:01.09.2017**

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ ಮತ್ತು ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಇವರುಗಳು ಅನುಮೋದಿಸಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಕೆ.ಆರ್.ಐ.ಡಿ.ಎಲ್., ನಿರ್ಮಿತಿ ಕೇಂದ್ರ ಮುಂತಾದ ಸಂಸ್ಥೆಗಳಿಗೆ ನೀಡುವ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ, ಕೆಲವು ಸಂದರ್ಭದಲ್ಲಿ ಶೇಕಡ 100 ರಷ್ಟು ಅಥವಾ ಶೇ.80 ರಷ್ಟು ಮುಂಗಡ ಹಣ ನೀಡುವ ಪರಿಪಾಠವನ್ನು ಇಟ್ಟುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಕೆ.ಆರ್.ಐ.ಡಿ.ಎಲ್ ಮತ್ತು ನಿರ್ಮಿತಿ ಕೇಂದ್ರ ಅಥವಾ ಇನ್ನಿತರ ಅನುಷ್ಠಾನ ಸಂಸ್ಥೆಗಳಿಗೆ ವಹಿಸಲ್ಪಟ್ಟ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಶೇ.40 ರಷ್ಟು ಹಣವನ್ನು ಮಾತ್ರ ಮುಂಗಡವಾಗಿ ನೀಡುವುದು. ನೀಡಿದ ಹಣಕ್ಕೆ ಕಾಮಗಾರಿಗಳು ಸಂಪೂರ್ಣ ಮುಗಿದಿವೆ ಎಂದು ಪ್ರಮಾಣೀಕರಿಸಿದ ನಂತರವೇ ಉಳಿದ ಶೇ.40ರಷ್ಟು ಹಣವನ್ನು ಬಿಡುಗಡೆ ಮಾಡುವುದು. ಕೊನೆಯ ಶೇ.20 ರಷ್ಟು ಹಣವನ್ನು 3ನೇ ವ್ಯಕ್ತಿಯಿಂದ ಕಾಮಗಾರಿಗಳ ಪರಿಶೀಲನಾ ವರದಿ ಬಂದ ನಂತರವೇ ಉಳಿದ ಹಣವನ್ನು ಬಿಡುಗಡೆ ಮಾಡುವುದು.

ಈಗಾಗಲೇ ನೀಡಿರುವ ಮುಂಗಡ ಹಣಕ್ಕೆ ಅನುಷ್ಠಾನ ಸಂಸ್ಥೆಯವರು ಪೂರ್ತಿ ಕೆಲಸ ಮಾಡದೇ ಹಣ ಇಟ್ಟುಕೊಂಡಿದ್ದಲ್ಲಿ ಅಥವಾ ಅರ್ಧ ಕೆಲಸವನ್ನು ಮಾಡಿದ್ದಲ್ಲಿ ಅಂತಹ ಸಂಸ್ಥೆಯವರಿಗೆ ನೋಟೀಸ್ ನೀಡಿ ಡಿಸೆಂಬರ್, 2017ರೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಆದೇಶ ನೀಡುವುದು. ತಪ್ಪಿದ್ದಲ್ಲಿ ಸದರಿ ಹಣವನ್ನು ಬಡ್ಡಿಯ ಸಮೇತ ವಾಪಸ್ಸು ಪಡೆಯಲು ಕ್ರಮ ಕೈಗೊಳ್ಳುವುದೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

01/09/17

(ಹೆಚ್.ಪಿ. ಹರ್ಷರಾಣಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಎಸ್-5),
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಿದೆ.
2. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ,
3. ಕಾರ್ಯದರ್ಶಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಸಂಖ್ಯೆ: ಯೋಇ 30 ಮಪ್ರಮಂ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:12.10.2018.

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು-560 001.

ಇವರಿಗೆ,
ಕಾರ್ಯದರ್ಶಿ,
ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ,
'ಮಲೆನಾಡ ಸಿರಿ', ಸಾಗರ ರಸ್ತೆ,
ಶಿವಮೊಗ್ಗ-577 201.

ಮಾನ್ಯರೇ,

ವಿಷಯ: ಮಲೆನಾಡು ಪ್ರದೇಶ ಪ್ರದೇಶಾಭಿವೃದ್ಧಿ ಮಂಡಳಿಯ 2018-19ನೇ ಸಾಲಿನ ಕ್ರಿಯಾ ಯೋಜನೆಯ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಮಪ್ರಅಮಂ:ಶಿ: ಕ್ರಿಯೋ/2018-19/148 ದಿನಾಂಕ:20.06.2018, ಮತ್ತು ಅನುದಾನ/ದಿನಾಂಕ:14.08.2018.

***

335
12/10/18

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳೆಡೆಗೆ ಗಮನ ಸೆಳೆಯಲಾಗಿದೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ 2018-19ನೇ ಸಾಲಿನ ಕ್ರಿಯಾ ಯೋಜನೆಯ ಬಗ್ಗೆ, ಈ ಕೆಳಕಂಡಂತೆ ಕ್ರಮಕೈಗೊಳ್ಳುವಂತೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

1) ಬಂಡವಾಳ ಲೆಕ್ಕಶೀರ್ಷಿಕೆಯಡಿ 2018-19ನೇ ಸಾಲಿನಲ್ಲಿ ಒದಗಿಸಿರುವ ರೂ.2008.00 ಲಕ್ಷಗಳನ್ನು ಸಂಪೂರ್ಣವಾಗಿ ಮುಂದುವರಿದ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು 2018-19ನೇ ಸಾಲಿನಲ್ಲಿ ಬಂಡವಾಳ ಲೆಕ್ಕಶೀರ್ಷಿಕೆಯಡಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದಲ್ಲ.

2) ವಿಶೇಷ ಘಟಕ ಯೋಜನೆ ಲೆಕ್ಕಶೀರ್ಷಿಕೆಯಡಿ 2018-19ನೇ ಸಾಲಿನಲ್ಲಿ ಒದಗಿಸಿರುವ ರೂ.406.00 ಲಕ್ಷಗಳನ್ನು ಸಂಪೂರ್ಣವಾಗಿ ಮುಂದುವರಿದ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು 2018-19ನೇ ಸಾಲಿನಲ್ಲಿ ವಿಶೇಷ ಘಟಕಯೋಜನೆ ಲೆಕ್ಕಶೀರ್ಷಿಕೆಯಡಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದಲ್ಲ.

17/10/18

-----2

3) ಗಿರಿಜನ ಉಪಯೋಜನೆಯ ಲೆಕ್ಕಶೀರ್ಷಿಕೆಯಡಿ 2018-19ನೇ ಸಾಲಿನಲ್ಲಿ ಒದಗಿಸಿರುವ ರೂ.186.00 ಲಕ್ಷಗಳಲ್ಲಿ ಮುಂದುವರಿದ ಕಾಮಗಾರಿಗಳಿಗೆ ರೂ.146.34 ಲಕ್ಷಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಇನ್ನುಳಿದ ಮೊತ್ತ ರೂ.39.66 ಲಕ್ಷಗಳಲ್ಲಿ 2018-19ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯ ಲೆಕ್ಕಶೀರ್ಷಿಕೆಯಡಿ ಹೊಸ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು.

ತಮ್ಮ ವಿಶ್ವಾಸಿ,

(ಆರ್.ವಿಜಯಕುಮಾರ್.)
ಸರ್ಕಾರದ ಅಧೀನ ಕಾರ್ಯದರ್ಶಿ-1&2(ಪ್ರ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗದ 2016-17 ನೇ ಸಾಲಿನ ಕ್ರಿಯಾ ಯೋಜನೆ ಅನುಮೋದಿಸುವ ಬಗ್ಗೆ.

ಓದಲಾಗಿದೆ: ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರ ಪತ್ರ ಸಂಖ್ಯೆ:ಮಪ್ರಮಂ:ನಗದು:ಕ್ರಿ.ಯೋ:ಅನುದಾನ:2016-17/1274. ದಿನಾಂಕ:19.09.2016.

**ಪ್ರಸ್ತಾವನೆ:** ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗಕ್ಕೆ 2016-17ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ.

| ಕ್ರಮ ಸಂಖ್ಯೆ | ಲೆಕ್ಕಶೀರ್ಷಿಕೆ | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 1. | 2515-00-103-0-02-101 | 41.00 |
| 2. | 2515-00-103-0-02-132 | 3751.00 |
| 3. | 2515-00-103-0-02-422 | 859.00 |
| 4. | 2515-00-103-0-02-423 | 349.00 |
| | ಒಟ್ಟು | **5000.00** |

ಮೇಲೆ ಓದಲಾದ ಪತ್ರದಲ್ಲಿ ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರು 2016-17ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ರೂ.5000.00 ಲಕ್ಷ ಮತ್ತು ಪ್ರಸಕ್ತ ಸಾಲಿನ ಆರಂಭಿಕ ಶಿಲ್ಕು ರೂ.927.42 ಲಕ್ಷ ಸೇರಿ ಒಟ್ಟು ರೂ.5927.42 ಲಕ್ಷಗಳಲ್ಲಿ 2016-17ನೇ ಸಾಲಿಗೆ ಆಡಳಿತ ವೆಚ್ಚ ರೂ.41.00 ಲಕ್ಷಗಳನ್ನು ಹೊರತುಪಡಿಸಿ, ಕಾಮಗಾರಿಗಳಿಗೆ ಲಭ್ಯವಿರುವ ರೂ.5822.57 ಲಕ್ಷಗಳಲ್ಲಿ ಮುಂದುವರೆದ 629 ಕಾಮಗಾರಿಗಳಿಗೆ ರೂ. 2945.72 ಲಕ್ಷಗಳನ್ನು ಮೀಸಲಿರಿಸಿ ಮತ್ತು ಉಳಿದ ಅನುದಾನ ರೂ. 2876.85 ಲಕ್ಷಗಳಲ್ಲಿ 563 ಹೊಸ ಕಾಮಗಾರಿಗಳಿಗೆ ರೂ.2728.66 ಲಕ್ಷಗಳನ್ನು ನಿಗದಿಪಡಿಸಿ ತಯಾರಿಸಿರುವ ವಾರ್ಷಿಕ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ:ಯೋಇ 13 ಮಪ್ರಮಂ 2016, ಬೆಂಗಳೂರು, ದಿನಾಂಕ:07.11.2016</u>**

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗಕ್ಕೆ 2016-17ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ರೂ.5000.00 ಲಕ್ಷ ಮತ್ತು ಪ್ರಸಕ್ತ ಸಾಲಿನ ಆರಂಭಿಕ ಶಿಲ್ಕು ರೂ.927.42 ಲಕ್ಷ ಸೇರಿ ಒಟ್ಟು ರೂ.5927.42 ಲಕ್ಷಗಳಲ್ಲಿ, ರೂ.2945.72 ಲಕ್ಷಗಳ ಅಂದಾಜು ಮೊತ್ತದ 629 ಮುಂದುವರೆದ ಕಾಮಗಾರಿಗಳು ಮತ್ತು ರೂ.2728.66 ಲಕ್ಷಗಳ ಅಂದಾಜು ಮೊತ್ತದ 563 ಹೊಸ ಕಾಮಗಾರಿಗಳನ್ನೊಳಗೊಂಡ ಕ್ರಿಯಾ ಯೋಜನೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

**<u>ಷರತ್ತುಗಳು:</u>**

1. ಸಾಮಾನ್ಯ ಯೋಜನೆಯಡಿ ಪ್ರಸ್ತಾಪಿಸಿರುವ ರೂ.5.00 ಲಕ್ಷಕ್ಕಿಂತ ಕಡಿಮೆ ಇರುವ ಎಲ್ಲಾ ಕಾಮಗಾರಿಗಳನ್ನು ತಾಲ್ಲೂಕುವಾರು ಕ್ರೋಢೀಕರಿಸಿ, ಪ್ಯಾಕೇಜ್ ಟೆಂಡರ್ ಮಾಡಿ ಅನುಷ್ಠಾನಗೊಳಿಸುವುದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಯೋಜನೆಯಡಿ ಪ್ರಸ್ತಾಪಿಸಿರುವ ರೂ.5.00 ಲಕ್ಷಕ್ಕಿಂತ ಕಡಿಮೆ ಕಾಮಗಾರಿಗಳಿಗೆ ಮಾತ್ರ ಪ್ಯಾಕೇಜ್ ಟೆಂಡರ್‌ನಿಂದ ವಿನಾಯಿತಿ ನೀಡಲಾಗಿದೆ.

2. ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ ದಿನಾಂಕ:31.03.2017ರೊಳಗೆ ಆಡಳಿತಾತ್ಮಕ ಅನುಮೋದನೆ ನೀಡದೆ ಇದ್ದಲ್ಲಿ ಸದರಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಿಂದ ಕೈಬಿಡತಕ್ಕದ್ದು. ಅನುಮೋದಿಸಿದ ಎಲ್ಲಾ ಕಾಮಗಾರಿಗಳನ್ನು ಇನ್ನು ಮುಂದೆ ವರ್ಕ್‌ಸಾಫ್ಟ್ (worksoft) ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದು.

3. ಚೆಕ್‌ಡ್ಯಾಂ ನಿರ್ಮಾಣ, ಬ್ರಿಡ್ಜ್ ಕಂ ಬ್ಯಾರೇಜ್, ಕಿಂಡಿ ಅಣೆಕಟ್ಟು, ಕೆರೆ, ರಾಜಕಾಲುವೆ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಸಾಧ್ಯವಿದ್ದ ಕಡೆ ಸಣ್ಣ ನೀರಾವರಿ ಇಲಾಖೆಯಿಂದ ಮಾಡಿಸಲು ಕ್ರಮ ಕೈಗೊಳ್ಳುವುದು.

4. ರಸ್ತೆಗಳಿಗೆ ಜಲ್ಲಿ, ಮುರಂ ಹಾಕಿಸುವುದು ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಿಂದ ಕೈಬಿಡತಕ್ಕದ್ದು. ಸದರಿ ಮೊತ್ತಕ್ಕೆ ಬೇರೆ ಕಾಮಗಾರಿಗಳನ್ನು ಪ್ರಸ್ತಾಪಿಸಲು ಸಂಬಂಧಪಟ್ಟವರಿಗೆ ತಿಳಿಸುವುದು.

5. ಕ್ರಿಯಾ ಯೋಜನೆಯ ಪುಟ ಸಂಖ್ಯೆ:86 ರಿಂದ 96 ರವರೆಗಿನ ಮಂಡಳಿಯ ಹಿಂದಿನ ಅಧ್ಯಕ್ಷರು ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಹಣದ ಕೊರತೆ ನಿಮಿತ್ತ ಕೈಬಿಡಲಾಗಿದೆ. ಅದೇ ರೀತಿ ಪುಟ ಸಂಖ್ಯೆ:107 ರಿಂದ 113 ರವರೆಗೆ ಮಂಡಳಿಯ ಹಿಂದಿನ ಕಾರ್ಯದರ್ಶಿಯವರು ಸರ್ಕಾರದ ಅನುಮೋದನೆ ಇಲ್ಲದೆ, ತಮ್ಮ ಅಧಿಕಾರ ದುರುಪಯೋಗಪಡಿಸಿ, ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಕೈಬಿಡಲಾಗಿದೆ ಒಂದು ವೇಳೆ ಸದರಿ ಕಾಮಗಾರಿಗಳಿಗೆ ಈಗಾಗಲೇ ಹಣ ಪಾವತಿಸಿದ್ದಲ್ಲಿ, ಇದು ಸರ್ಕಾರಿ ಹಣದ ದುರುಪಯೋಗವಾಗುವುದರಿಂದ, ಸರ್ಕಾರಕ್ಕೆ ಉಂಟು ಮಾಡಿದ ನಷ್ಟವನ್ನು ಲೆಕ್ಕ ಹಾಕಿ ಹಿಂದಿನ ಕಾರ್ಯದರ್ಶಿಗಳಿಂದ ವಸೂಲಿ ಮಾಡಲು ಕರಡು ಆರೋಪ ಪಟ್ಟಿ ತಯಾರಿಸಿ ಸರ್ಕಾರಕ್ಕೆ ಒಂದು ತಿಂಗಳೊಳಗೆ ಸಲ್ಲಿಸುವುದು.

6. ಸಮುದಾಯ ಭವನ, ಅಂಗನವಾಡಿ ನಿರ್ಮಿಸುವ ಮೊದಲು ಸರ್ಕಾರದಿಂದ ಜಮೀನು/ಸೈಟು ಲಭ್ಯವಿರುವ ಬಗ್ಗೆ ಸಂಬಂಧಪಟ್ಟವರಿಂದ ಪತ್ರ ಪಡೆದ ನಂತರವೇ ಆಡಳಿತಾತ್ಮಕ ಅನುಮೋದನೆ ನೀಡುವುದು.

7. 2016-17ನೇ ಸಾಲಿನ ಕ್ರಿಯಾ ಯೋಜನೆಗೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಅನುಮೋದನೆ ಪಡೆದಿರುವುದಿಲ್ಲ. ಮುಂದಿನ ಮಂಡಳಿ ಸಭೆಯಲ್ಲಿ ಸರ್ಕಾರದಿಂದ ಅನುಮೋದಿಸಲ್ಪಟ್ಟ ಕ್ರಿಯಾ ಯೋಜನೆಯನ್ನು ಮಂಡಳಿಯ ಅವಗಾಹನೆಗೆ ಮಂಡಿಸುವುದು.

8. ಈಗ ಅನುಮೋದನೆ ಮಾಡಿದ ಕ್ರಿಯಾ ಯೋಜನೆಯ ಕಾಮಗಾರಿಗಳಲ್ಲಿ ಬದಲಾವಣೆ ಮಾಡಬೇಕಾಗಿದ್ದಲ್ಲಿ, ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.

9. ಹಿಂದಿನ ವರ್ಷಗಳ ಹಲವಾರು ಕಾಮಗಾರಿಗಳಿಗೆ ಇನ್ನೂ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ. ದಿನಾಂಕ:30.11.2016 ರೊಳಗೆ ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡದೇ ಇದ್ದಲ್ಲಿ, ಸದರಿ ಕಾಮಗಾರಿಗಳನ್ನು ತೆಗೆದುಕೊಳ್ಳುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಫೀ ಅಹಮದ್.ಎಚ್.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ 1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:
ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ
ಪ್ರತಿ:

1. ಮಾನ್ಯ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ನಿರ್ದೇಶಕರು, ಎಡಿಬಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಸಹಾಯಕ.
5. ವಾರದ ರಾಜ್ಯ ಪತ್ರ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

9/12/2017 ೨೯ MADB change work 001.jpg

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ, ಇದಕ್ಕೆ ಸಂಬಂಧಿಸಿದ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳನ್ನು ಒಂದು ಬಾರಿ ಬದಲಾವಣೆ ಮಾಡುವ ಅಧಿಕಾರವನ್ನು ಮಂಡಳಿಯ ಕಾರ್ಯದರ್ಶಿಯವರಿಗೆ ನೀಡುವ ಬಗ್ಗೆ.

****

**ಸರ್ಕಾರಿ ಆದೇಶ ಸಂಖ್ಯೆ:ಯೋಇ 29 ಮಪ್ರಮಂ 2017, ಬೆಂಗಳೂರು,**
**ದಿನಾಂಕ:31.08.2017**

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ ಇದಕ್ಕೆ ಸಂಬಂಧಿಸಿದ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳನ್ನು ಒಂದು ಬಾರಿ ಬದಲಾವಣೆ ಮಾಡುವ ಅಧಿಕಾರವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯವರಿಗೆ ನೀಡಿ ಆದೇಶಿಸಿದೆ:-

1. ಬದಲಿ ಕಾಮಗಾರಿಯ ಪ್ರಸ್ತಾವನೆಯು ಸಂಬಂಧಪಟ್ಟ ಸದಸ್ಯರುಗಳಿಂದ ಸ್ವೀಕೃತವಾಗಿರುವುದನ್ನು ದೃಢೀಕರಿಸಿಕೊಳ್ಳುವುದು.
2. ಪ್ರಸ್ತಾಪಿಸಿದ ಬದಲಿ ಕಾಮಗಾರಿಯನ್ನು ಸರ್ಕಾರದ ಇತರ ಯೋಜನೆಗಳಡಿಯಲ್ಲಿ/ಸಂಘ ಸಂಸ್ಥೆಗಳ ವತಿಯಿಂದ ಕೈಗೊಂಡಿರುವುದಿಲ್ಲ ಎಂಬುದನ್ನು ದೃಢೀಕರಿಸಿಕೊಳ್ಳುವುದು.
3. ಪ್ರಸ್ತಾಪಿಸಿದ ಬದಲಿ ಕಾಮಗಾರಿಯ ಅಂದಾಜು ಮೊತ್ತವು ಅನುಮೋದಿತ ಕಾಮಗಾರಿಯ ಅಂದಾಜು ಮೊತ್ತವನ್ನು ಮೀರಿರಬಾರದು.
4. ಅನುಮೋದಿತ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುವುದಿಲ್ಲ/ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ ಎಂಬುದನ್ನು ದೃಢೀಕರಿಸಿ ಕೊಳ್ಳುವುದು.
5. ಅನುಮೋದಿತ ಕಾಮಗಾರಿಯ ಮೊತ್ತವನ್ನು ಪುನಃ ವಿಭಜಿಸಲು ಅನುಮೋದನೆ ನೀಡುವಂತಿಲ್ಲ.
6. ಬದಲಿ ಕಾಮಗಾರಿಯ ಪ್ರಸ್ತಾವನೆಯನ್ನು ಒಮ್ಮೆ ಮಾತ್ರ ಪ್ರಸ್ತಾಪಿಸತಕ್ಕದ್ದು.
7. ಕಾಮಗಾರಿ ಬದಲಾವಣೆ ಬಗ್ಗೆ ಆದೇಶ ಹೊರಡಿಸಿದ ನಂತರ ತಪ್ಪದೇ **ಸರ್ಕಾರದ ಗಮನಕ್ಕೆ ತರುವುದು.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಫೀಕ್ ಅಹಮದ್.ಎಂ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ-1&2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

31.8.17

ಇವರಿಗೆ:
ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ.

ಪ್ರತಿ:

1. ಮಾನ್ಯ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ನಿರ್ದೇಶಕರು, ಎಡಿಬಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5. ವಾರದ ರಾಜ್ಯ ಪತ್ರ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.